ಕಬ್ಬು ಬೆಳೆಯುವ ರೈತರಿಗೆ ಬೆಲೆ ಕುಸಿತವಾಗಿರುವುದರಿಂದ ಪರಿಹಾರ

433(48) ಶ್ರೀ ಉಮೇಶ್. ವಿಶ್ವನಾಥ್ ಕತ್ತಿ (ಹುಕ್ಕೇರಿ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸಕ್ಕರೆ ಬೆಲೆ ಕುಸಿತದಿಂದ ರಾಜ್ಯದಲ್ಲಿ ಕಬ್ಬು ಬೆಳೆಯುವ ರೈತರ ಪರಿಸ್ಥಿತಿ ಹದಗೆಟ್ಟು ತೊಂದರೆಯಾಗುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ರೈತರು ಸಂಕಷ್ಟದಿಂದ ಪಾರಾಗಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ. ನೆರೆ ರಾಜ್ಯವಾದ ಮಹಾರಾಷ್ಟ್ರದಲ್ಲಿ ಸಕ್ಕರೆ ಖರೀದಿಗೆ ಖರೀದಿ ತೆರಿಗೆಯನ್ನು ರದ್ದು ಮಾಡಿದ ರೀತಿ ರಾಜ್ಯದಲ್ಲಿ ಖರೀದಿ ತೆರಿಗೆಯನ್ನು ರದ್ದು ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೆನಿ?

ಈ. ಮಹಾರಾಷ್ಟ್ರದಲ್ಲಿ ಸಕ್ಕರೆ ರಫ್ತು ಮಾಡಲು ಇನ್‌ಸೆಂಟಿವ್ ಕೊಡುತ್ತಿರುವ ರೀತಿ ನಮ್ಮ ರಾಜ್ಯದಲ್ಲಿ ಕೊಡಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಬಂದಿದೆ

ಆ. ರೈತರ ಕಬ್ಬಿನ ಬಿಲ್ಲನ್ನು ಪಾವತಿಸಲು ಸಕ್ಕರೆ ಕಾರ್ಖಾನೆಗಳು ಪ್ರಾಮಾಣಿಕ ಪ್ರಯತ್ನ ಮಾಡುತ್ತಿವೆ. ಬೇರೆ ಬೇರೆ ಮೂಲಗಳಿಂದ ಹಣ ಕ್ರೋಢೀಕರಿಸಿಕೊಂಡು ಕಬ್ಬು ಬೆಲೆ ಬಾಕಿ ಪಾವತಿಸುತ್ತಿವೆ. ಸರ್ಕಾರವೂ ಕೂಡಾ ಕೆಲವು ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಸರ್ಕಾರದಿಂದ ಮೃದು ಸಾಲ ಸಹ ಮಂಜೂರ್ಮಾಡಿ ಬಿಡುಗಡೆ ಮಾಡಿದೆ. ಅದರಂತೆ ಬಾಕಿ ಉಳಿಸಿಕೊಂಡಿರುವ ರೈತರ ಕಬ್ಬಿನ ಬಿಲ್ಲನ್ನು ಪಾವತಿಸಲು ಸಕ್ಕರೆ ಕಾರ್ಖಾನೆಗಳಿಗೆ ಸೂಚನೆ ನೀಡಲಾಗುತ್ತಿದೆ.

ಇ. ಈ ಮಹಾರಾಷ್ಟ್ರದಲ್ಲಿ ಹಲವು ರಿಯಾಯ್ತಿಗಳನ್ನು ನೀಡಲಾಗುತ್ತಿದೆ ಎಂಬ ವರದಿಗಳನ್ವಯ ಅಲ್ಲಿನ ನಿಜಸ್ಥಿತಿ ತಿಳಿಯಲು ಅಧಿಕಾರಿಗಳನ್ನು ಮಹಾರಾಷ್ಟ್ರಕ್ಕೆ ಕಳುಹಿಸಲಾಗಿತ್ತು. ಆದರೆ ಮಹಾರಾಷ್ಟ್ರದಲ್ಲಿ ಪ್ರತಿ ಟನ್ನಿಗೆ ರೂ. 1000 ದಂತೆ ರಫ್ತು ರಿಯಾಯ್ತಿ ಸೌಲಭ್ಯವನ್ನು ಹೊರತುಪಡಿಸಿದರೆ ಬೇರೆ ಯಾವ ರೀತಿಯ ರಿಯಾಯ್ತಿ ಅಲ್ಲಿ ಜಾರಿಯಲ್ಲಿ ಇರುವುದಿಲ್ಲವೆಂಬುದು ಕಂಡು ಬಂದಿದೆ. ಕರ್ನಾಟಕದಲ್ಲಿ ಈಗಾಗಲೇ ರಫ್ತು ಮಾಡಲಾಗುವ ಸಕ್ಕರೆಯನ್ನು ಉತ್ಪಾದಿಸಲು ಉಪಯೋಗಿಸಲಾಗುವ ಕಬ್ಬಿನ ಮೇಲೆ ಖರೀದಿ ತೆರಿಗೆಯಿಂದ ವಿನಾಯ್ತಿ ನೀಡಲಾಗುತ್ತಿದೆ.

ಅಂದರೆ, ಸರಿಸುಮಾರು ರಫ್ತು ಮಾಡಿದ ಒಂದು ಟನ್ ಸಕ್ಕರೆಗೆ ರೂ. 450-550 ರವರೆಗೆ ಸಹಾಯಧನ ಸಿಗುತ್ತದೆ. ಅದರಂತೆ ರೈತರ ಹಿತ ದೃಷ್ಟಿಯಿಂದ ರೂ. 15 ಪ್ರತಿ ಟನ್ ಕಬ್ಬಿಗೆ ತೆರಿಗೆಯಿಂದ ರಿಯಾಯ್ತಿ ನೀಡುವುದನ್ನು ಮುಂದುವರೆಸಿದೆ.

ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆ

435(340) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆಗೆ ಸರ್ಕಾರಿ ಅನುಮತಿ ನೀಡಿದೆಯೇ;

ಆ. ಯಾವ ಸಂಸ್ಥೆಗೆ ಕಂಪನಿ ಎಷ್ಟು ಎಕರೆ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗಿದೆ;

ಇ. ಇದರಿಂದ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು;

ಈ. ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆಗೆ ಅನುಮತಿ ನೀಡುವುದನ್ನು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಪರಿಸರವಾದಿಗಳು ವಿರೋಧಿಸುತ್ತಿದ್ದರೂ ಸರ್ಕಾರ ಅನುಮತಿ ನೀಡಲು ಕಾರಣವೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ. ಹೌದು

ಆ. ಮೆ:ಕುದುರೆಮುಖ ಕಬ್ಬಿಣ ಅದಿರು ಸಂಸ್ಥೆಗೆ 4605 ಹೆಕ್ಟೇರ್ ಪ್ರದೇಶದಲ್ಲಿ 30 ವರ್ಷಗಳ ಅವಧಿಗೆ 25-7-1969 ರಿಂದ ಅನ್ವಯವಾಗುವಂತೆ ಗಣಿ ಗುತ್ತಿಗೆ ನೀಡಲಾಗಿತ್ತು. ಗಣಿ ಗುತ್ತಿಗೆ ಅವಧಿ ಮುಗಿದಿದ್ದು, ಸುಪ್ರೀಂಕೋರ್ಟ್ ಆದೇಶದನ್ವಯ ಸದರಿ ಸಂಸ್ಥೆಯವರು ಗಣಿಗಾರಿಕೆ ಮುಂದುವರೆಸಿದ್ದಾರೆ.

ಇ. ಇಲ್ಲಿಯವರೆಗೆ ಇದರಿಂದ ರೂ. 15,68,00,799.00 ಗಳ ರಾಜಧನ ಸರ್ಕಾರಕ್ಕೆ ಬಂದಿರುತ್ತದೆ.

ಈ. ಹೊಸದಾಗಿ ಗಣಿಗಾರಿಕೆಗೆ ಪಶ್ಚಿಮಘಟ್ಟ ಪ್ರದೇಶದಲ್ಲಿ ಅನುಮತಿ ನೀಡಬಾರದೆಂದು ಸರ್ಕಾರವು ತೀರ್ಮಾನ ತೆಗೆದುಕೊಂಡಿರುತ್ತದೆ. ಮುಂದೆ ಪಶ್ಚಿಮಘಟ್ಟ ಪ್ರದೇಶದಲ್ಲಿ ಹೊಸ ಗಣಿಗಾರಿಕೆಗೆ ಅನುಮತಿ ನೀಡುವುದಿಲ್ಲ.

ಹಾಲಕ್ಕಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ

436(341) ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ(ಅಂಕೋಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಪ.ಪಂಗಡಕ್ಕೆ ಸೇರಿಸಲು ಕೇಂದ್ರಕ್ಕೆ ಯಾವ ಯಾವ ಜಾತಿಯನ್ನು ಶಿಫಾರಸ್ಸು ಮಾಡಿದೆ?

ಆ. ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಪಂಗಡದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಶಿಫಾರಸ್ಸು ಮಾಡಲಾಗಿದೆಯೇ?

ಇ. ಸಾಂಸ್ಕೃತಿಕವಾಗಿ ಮುಂದುವರಿದಿದ್ದರೂ ಬಡತನದಲ್ಲಿರುವ ಈ ಪಂಗಡವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಇರುವ ತೊಂದರೆ ಏನು?

ಈ. ಈ ಕುರಿತು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ರಾಜ್ಯದಲ್ಲಿ ಪ.ಪಂಗಡಕ್ಕೆ ಸೇರಿಸಲು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಈ ಕೆಳಕಂಡ ಜಾತಿಗಳನ್ನು ಶಿಫಾರಸ್ಸು ಮಾಡಲಾಗಿದೆ.

Meda (Sl. No. 37)	Madara, Medaraj, Gauriga Buruda
Naikda (Sl. No. 38)	Nayak Pariwar Naik
Nayaka	Beda
Cholivala Nayaka	Naik